# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಕೇಂದ್ರ ಸರ್ಕಾರದ "ಪಂಚಾಯತಿಗಳ ಸಬಲೀಕರಣ ಮತ್ತು ಉತ್ತರದಾಯಿತ್ವ ಪ್ರೋತ್ಸಾಹ ಯೋಜನೆ" ಅಡಿಯಲ್ಲಿ 2010-11 ಮತ್ತು 2011-12ನೇ ಸಾಲುಗಳಲ್ಲಿ ಕರ್ನಾಟಕ ರಾಜ್ಯಕ್ಕೆ ನೀಡಲಾಗಿದ್ದ ಪ್ರಶಸ್ತಿ ಮೊತ್ತವನ್ನು ರಾಜ್ಯದ ಪಂಚಾಯತ್ ವ್ಯವಸ್ಥೆಯನ್ನು ಬಲವರ್ಧನೆಗೊಳಿಸಲು ಹಾಗು ಉತ್ತಮ ಸಾಧನೆ ಮಾಡಿರುವ ರಾಜ್ಯದ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಒದಗಿಸುವ ಕುರಿತು

**ಓದಲಾಗಿದೆ :** (1) ಪಂಚಾಯತ್ ರಾಜ್ ಮಂತ್ರಾಲಯದ ಪಂಚಾಯತಿಗಳಿಗೆ ಪ್ರಶಸ್ತಿ ಮಾರ್ಗಸೂಚಿಗಳು
(2) ಪಂಚಾಯತ್ ರಾಜ್ ಮಂತ್ರಾಲಯದ ಬಹುಮಾನದ ನಗದು ಬಿಡುಗಡೆ ಆದೇಶ ಸಂಖ್ಯೆ : G-416884/DD/2009, ದಿನಾಂಕ:06.04.2011
(3) ಪಂಚಾಯತ್ ರಾಜ್ ಮಂತ್ರಾಲಯದ ಬಹುಮಾನದ ನಗದು ಬಿಡುಗಡೆ ಆದೇಶ ಸಂಖ್ಯೆ : G-11012/2/2010-Cash, ದಿನಾಂಕ: 17.04.2012

**ಪ್ರಸ್ತಾವನೆ :**

ಅಧಿಕಾರ ವಿಕೇಂದ್ರೀಕರಣ ಅಥವಾ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಗುರುತಿಸಬಹುದಾದ ಕರ್ನಾಟಕದ ಸಾಧನೆಯನ್ನು ಪರಿಗಣನೆಗೆ ತೆಗೆದುಕೊಂಡು ಕೇಂದ್ರ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯವು "ಪಂಚಾಯತಿಗಳ ಸಬಲೀಕರಣ ಮತ್ತು ಉತ್ತರದಾಯಿತ್ವ ಪ್ರೋತ್ಸಾಹ ಯೋಜನೆ" ಅಡಿಯಲ್ಲಿ 2010-11 ಮತ್ತು 2011-12ನೇ ಸಾಲುಗಳಲ್ಲಿ ಕರ್ನಾಟಕ ರಾಜ್ಯಕ್ಕೆ ರಾಷ್ಟ್ರೀಯ ಮಟ್ಟದಲ್ಲಿ ಎರಡನೇ ಸ್ಥಾನವನ್ನು ನೀಡಿ ಪ್ರಶಸ್ತಿ ಹಾಗು ನಗದು ಬಹುಮಾನದೊಂದಿಗೆ ಪುರಸ್ಕರಿಸಿದೆ. ಈ ರೀತಿ ನೀಡಲಾದ ನಗದು ಬಹುಮಾನವು 2010-11ನೇ ಸಾಲಿನಲ್ಲಿ ರೂ. 2.00 ಕೋಟಿಗಳು ಹಾಗು 2011-12ನೇ ಸಾಲಿನಲ್ಲಿ ರೂ.2.00 ಕೋಟಿಗಳಾಗಿದೆ. 2010-11ನೇ ಸಾಲಿನಲ್ಲಿ ನೀಡಲಾದ ಬಹುಮಾನದ ನಗದು ಪಂಚಾಯತ್ ರಾಜ್ ಮಂತ್ರಾಲಯದಿಂದ ನೇರವಾಗಿ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು ಇವರ ಖಾತೆಗೆ ಓದಲಾದ (2)ರ ಆದೇಶದ ಮೂಲಕ ಜಮೆಯಾಗಿದೆ. 2011-12ನೇ ಸಾಲಿಗೆ ನೀಡಲಾದ ಬಹುಮಾನದ ನಗದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಓದಲಾದ(3)ರ ಆದೇಶದ ಮೂಲಕ ಬಿಡುಗಡೆಗೊಂಡಿದ್ದು ಈ ಮೊತ್ತವನ್ನು ಸಿಂಡಿಕೇಟ್ ಬ್ಯಾಂಕ್, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಶಾಖೆ, ಬೆಂಗಳೂರು ಇಲ್ಲಿ ತೆರೆಯಲಾದ 04462010089603 ಸಂಖ್ಯೆಯ ಉಳಿತಾಯ ಖಾತೆಯಲ್ಲಿ ಜಮೆ ಮಾಡಲಾಗಿದೆ. ಓದಲಾದ(1)ರ "ಪಂಚಾಯತಿಗಳಿಗೆ ಪ್ರಶಸ್ತಿ" ಮಾರ್ಗಸೂಚಿಗಳಲ್ಲಿ ರಾಜ್ಯಗಳಿಗೆ ನೀಡಲಾಗುವ ಬಹುಮಾನದ ಮೊತ್ತದಲ್ಲಿ ಶೇಖಡ 20 ರಷ್ಟು ಮೊತ್ತವನ್ನು ರಾಜ್ಯದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಬಲವರ್ಧನೆಗೊಳಿಸಲು ಹಾಗು ಉಳಿದ ಶೇಖಡ 80ರಷ್ಟು ಮೊತ್ತವನ್ನು ಪಂಚಾಯತಿ ರಾಜ್ ಸಂಸ್ಥೆಗಳಿಗೆ ಉತ್ತೇಜನ ಬಹುಮಾನವಾಗಿ ನೀಡಲು ಅವಕಾಶವಿದೆ ಎಂದು ತಿಳಿಸಲಾಗಿದೆ. ಓದಲಾದ(1)ರ ಮಾರ್ಗಸೂಚಿಗಳನ್ನು ಆಧಾರವಾಗಿಟ್ಟುಕೊಂಡು ಪ್ರಸ್ತುತ ಲಭ್ಯವಿರುವ ರೂ.4.00 ಕೋಟಿಗಳ ನಗದು ಬಹುಮಾನದ ಪೈಕಿ ಶೇಖಡ 20 ರಷ್ಟು ಮೊತ್ತವನ್ನು ರಾಜ್ಯದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಬಲವರ್ಧನೆಗೊಳಿಸಲು ಹಾಗು ಉಳಿದ ಶೇಖಡ 80ರಷ್ಟು ಮೊತ್ತವನ್ನು ರಾಜ್ಯದ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳ ಪೈಕಿ ಉತ್ತಮ ಸಾಧನೆ ಮಾಡಿರುವ ಪಂಚಾಯತಿಗಳಿಗೆ ಉತ್ತೇಜನ ಅನುದಾನವನ್ನಾಗಿ ನೀಡಲು ನಿರ್ಣಯಿಸಲಾಗಿದೆ. ಅದಕ್ಕಾಗಿ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 09 ಜಿಪಸ 2011, ಬೆಂಗಳೂರು, ದಿನಾಂಕ:28.03.2013**

ಮೇಲಿನ ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು, ಕೇಂದ್ರ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯವು "ಪಂಚಾಯತಿಗಳ ಸಬಲೀಕರಣ ಮತ್ತು ಉತ್ತರದಾಯಿತ್ವ ಪ್ರೋತ್ಸಾಹ ಯೋಜನೆ" ಅಡಿಯಲ್ಲಿ ಕರ್ನಾಟಕ ರಾಜ್ಯಕ್ಕೆ 2010-11ನೇ ಸಾಲಿಗೆ ನೀಡಿರುವ ರೂ.2.00 ಕೋಟಿಗಳು ಹಾಗು 2011-12ನೇ ಸಾಲಿಗೆ ನೀಡಿರುವ ರೂ.2.00 ಕೋಟಿಗಳು **ಒಟ್ಟು ರೂ.4.00 ಕೋಟಿಗಳು (ರೂಪಾಯಿ ನಾಲ್ಕು ಕೋಟಿಗಳು ಮಾತ್ರ)** ಮೊತ್ತವನ್ನು ಈ ಕೆಳಗೆ ವಿವರಿಸಿದ ಅನುಸಾರ ಬಳಸಿಕೊಳ್ಳಲು ಮಂಜೂರಾತಿ ನೀಡಲಾಗಿದೆ.

1. ರೂ. 4.00 ಕೋಟಿಗಳ (ರೂಪಾಯಿ ನಾಲ್ಕು ಕೋಟಿಗಳು ಮಾತ್ರ) ಪೈಕಿ ಶೇಕಡ 10 ರಷ್ಟು ಅನುದಾನವನ್ನು ಅಂದರೆ ರೂ. 40.00 ಲಕ್ಷಗಳನ್ನು (ರೂಪಾಯಿ ನಲವತ್ತು ಲಕ್ಷಗಳು ಮಾತ್ರ) ರಾಜ್ಯದ ಪಂಚಾಯತ್ ರಾಜ್ ವ್ಯವಸ್ಥೆ ಬಲವರ್ಧನೆಗಾಗಿ ಬೆಂಗಳೂರಿನಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ **"ರಾಜ್ಯ ಪಂಚಾಯತ್ ಸಂಪನ್ಮೂಲ ಕೇಂದ್ರ"** ನಿರ್ಮಾಣಕ್ಕಾಗಿ ಅಗತ್ಯವಿರುವ ಕಾಮಗಾರಿಗಳ ನಿರ್ವಹಣೆಗಾಗಿ ಮೀಸಲಿಟ್ಟಿದೆ.
2. ಬಾಕಿ ಉಳಿಯುವ ರೂ. 3.60 ಕೋಟಿಗಳ (ರೂಪಾಯಿ ಮೂರು ಕೋಟಿ ಅರವತ್ತು ಲಕ್ಷಗಳು ಮಾತ್ರ) ಮೊತ್ತವನ್ನು ಕ್ರಮ ಸಂಖ್ಯೆ(3)ರಲ್ಲಿ ತಿಳಿಸಿದಂತೆ ರಾಜ್ಯದ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಉತ್ತೇಜನ ಬಹುಮಾನವಾಗಿ ಅವುಗಳ ಬ್ಯಾಂಕ್ ಖಾತೆಗಳಿಗೆ ಬಿಡುಗಡೆಗೊಳಿಸಿದೆ.
3. ಉತ್ತೇಜನ ಬಹುಮಾನವನ್ನು ಪಡೆದ ರಾಜ್ಯದ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳು :

| ಕ್ರ. ಸಂ. | ಪಂಚಾಯತ್ ರಾಜ್ ಸಂಸ್ಥೆ ಹೆಸರು ಮತ್ತು ವಿಳಾಸ | ಉತ್ತೇಜನ ಬಹುಮಾನವಾಗಿ ನೀಡಲಾದ ಮೊತ್ತ (ರೂ.ಲಕ್ಷಗಳಲ್ಲಿ ) | ಉತ್ತೇಜನ ಬಹುಮಾನವನ್ನು ಬಿಡುಗಡೆಗೊಳಿಸಿದ ಪಂಚಾಯತಿ ಬ್ಯಾಂಕ್ ಉಳಿತಾಯ ಸಂಖ್ಯೆ | 13ನೇ ಹಣಕಾಸು ಆಯೋಗ ಅನುದಾನದ ಬ್ಯಾಂಕ್ ಹೆಸರು ಮತ್ತು ವಿಳಾಸ | **IFSC Code** |
|---|---|---|---|---|---|
| 1 | ಜಿಲ್ಲಾ ಪಂಚಾಯತಿ, **ದಕ್ಷಿಣ ಕನ್ನಡ** | 60-00 | 64059481407 | State Bank of Mysore, Mangalore | SBMY0040149 |
| 2 | ಜಿಲ್ಲಾ ಪಂಚಾಯತಿ, **ಉತ್ತರ ಕನ್ನಡ** | 60-00 | 64059573507 | State Bank of Mysore, Karwar | SBMY0040287 |
| 3 | ತಾಲ್ಲೂಕು ಪಂಚಾಯತಿ, **ಕೊಪ್ಪ** ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ | 30-00 | 64059575678 | State Bank of Mysore, Koppa | SBMY0040146 |
| 4 | ತಾಲ್ಲೂಕು ಪಂಚಾಯತಿ, **ಬಸವ ಕಲ್ಯಾಣ** ತಾಲ್ಲೂಕು, ಬೀದರ್ ಜಿಲ್ಲೆ | 30-00 | 31272685958 | State Bank of India, Basava Kalyana | SBIN0013141 |
| 5 | ತಾಲ್ಲೂಕು ಪಂಚಾಯತಿ, **ಪುತ್ತೂರು** | 30-00 | 64059575963 | State Bank of Mysore, Puttur | SBMY0040152 |

| | | | | | |
|---|---|---|---|---|---|
| | ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ | | | | |
| 6 | ತಾಲ್ಲೂಕು ಪಂಚಾಯತಿ, **ಬೈಲಹೊಂಗಲ** ತಾಲ್ಲೂಕು, ಬೆಳಗಾವಿ ಜಿಲ್ಲೆ | 30-00 | 31260633220 | State Bank of India, Bailhongal | SBIN0000263 |
| 7 | ಗ್ರಾಮ ಪಂಚಾಯತಿ, **ಘಾಟಬೋರಾಳ,** ಹುಮ್ನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ | 15-00 | 74001947290 | Krishna Grameena bank (KGB), GHATBORAL | SBIN0RRKRGB |
| 8 | ಗ್ರಾಮ ಪಂಚಾಯತಿ, **ಇಟ್ಟಮಡು,** ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ | 15-00 | 64061504727 | State Bank of Mysore (SBM) ITTAMADU | SBMY0040676 |
| 9 | ಗ್ರಾಮ ಪಂಚಾಯತಿ, **ಮಡಮಕ್ಕಿ,** ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ | 15-00 | 100701011000267 | Vijaya Bank, Heradi | VIJB0001007 |
| 10 | ಗ್ರಾಮ ಪಂಚಾಯತಿ, **ಗುಮ್ಮಗೋಳ,** ನವಲಗುಂದ ತಾಲ್ಲೂಕು, ಧಾರವಾಡ ಜಿಲ್ಲೆ | 15-00 | 115001011000847 | Vijaya Bank, Morab | VIJB0001150 |
| 11 | ಗ್ರಾಮ ಪಂಚಾಯತಿ, **ಮೇಲಿನಬೆಸಗೆ,** ಹೊಸನಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ | 15-00 | 64060772866 | State Bank of Mysore (SBM), Hosanagar | SBMY0040307 |
| 12 | ಗ್ರಾಮ ಪಂಚಾಯತಿ, **ವಾಲ್ನೂರು-ತ್ಯಾಗತ್ತೂರು,** ಸೋಮವಾರ ಪೇಟೆ ತಾಲ್ಲೂಕು, ಕೊಡಗು ಜಿಲ್ಲೆ | 15-00 | 020100101004424 | Copraration Bank, Valnoor | CORP0000201 |
| 13 | ಗ್ರಾಮ ಪಂಚಾಯತಿ, **ಯರಗೇರಾ,** | 15-00 | 911010061809877 | State Bank of Mysore(SBM), Hanumsagar | UTIB0001310 |

| | | | | | |
|---|---|---|---|---|---|
| | ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ | | | | |
| 14 | ಗ್ರಾಮ ಪಂಚಾಯತಿ, **ಹುಲಕೋಟಿ**, ಗದಗ ತಾಲ್ಲೂಕು, ಗದಗ ಜಿಲ್ಲೆ | 15-00 | 12192200123094 | Syndicate Bank, Hulakoti | SYNB0001219 |
| **ಒಟ್ಟು ರೂ. ಲಕ್ಷಗಳಲ್ಲಿ** | | **360-00** | | | |
| (ರೂಪಾಯಿ ಮೂರು ಕೋಟಿ ಅರವತ್ತು ಲಕ್ಷಗಳು ಮಾತ್ರ) | | | | | |

4. ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು ಇವರ ಖಾತೆಗೆ ಜಮೆಯಾಗಿದ್ದ 2010-11ನೇ ಸಾಲಿನ ರೂ.2.00 ಕೋಟಿಗಳ ಮೊತ್ತವನ್ನು ರಾಜ್ಯ ಪಂಚಾಯತ್ ಸಂಪನ್ಮೂಲ ಕೇಂದ್ರದ ಕಾಮಗಾರಿಗಳ ನಿರ್ವಹಣೆಗಾಗಿ ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ನಿಗಮಕ್ಕೆ (ಹಿಂದಿನ ಕರ್ನಾಟಕ ಭೂಸೇನಾ ನಿಗಮ) ನೀಡಿದ್ದನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯು ಕೂಡಲೇ ಅವರಿಂದ ಹಿಂಪಡೆದು ಕ್ರಮ ಸಂಖ್ಯೆ(3)ರ ಕೋಷ್ಟಕದಲ್ಲಿನ ಕ್ರಮ ಸಂಖ್ಯೆ (2),(5),(6),(11),(12),(13) ಹಾಗು (14)ರಲ್ಲಿ ತಿಳಿಸಿದ ಪಂಚಾಯತ್ ಸಂಸ್ಥೆಗಳಿಗೆ ಅವುಗಳ ಮುಂದೆ ನಮೂಧಿಸಿದ ಮೊತ್ತವನ್ನು ಆಯಾ ಸಂಸ್ಥೆಗಳ ಬ್ಯಾಂಕ್ ಖಾತೆಗಳಿಗೆ ಆನ್‌ಲೈನ್ ಮೂಲಕ ವರ್ಗಾಯಿಸುವುದು. ಹಾಗು ಉಳಿದ ರೂ.20.00 ಲಕ್ಷಗಳನ್ನು (ರೂಪಾಯಿ ಇಪ್ಪತ್ತು ಲಕ್ಷಗಳು ಮಾತ್ರ) ಸಿಂಡಿಕೇಟ್ ಬ್ಯಾಂಕ್, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಶಾಖೆ, ಬೆಂಗಳೂರು ಇಲ್ಲಿ ತೆರೆಯಲಾದ 04462010089603 ಸಂಖ್ಯೆಯ ಉಳಿತಾಯ ಖಾತೆಗೆ ವರ್ಗಾಯಿಸುವುದು.
5. 2011-12ನೇ ಸಾಲಿಗೆ ನೀಡಿರುವ ಮೊತ್ತ ರೂ.2.00 ಕೋಟಿಗಳು ಸಿಂಡಿಕೇಟ್ ಬ್ಯಾಂಕ್, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಶಾಖೆ, ಬೆಂಗಳೂರು ಇಲ್ಲಿ ತೆರೆಯಲಾದ 04462010089603 ಸಂಖ್ಯೆಯ ಉಳಿತಾಯ ಖಾತೆಯಲ್ಲಿ ಜಮೆಯಾಗಿದ್ದು ಕ್ರಮ ಸಂಖ್ಯೆ(3)ರ ಕೋಷ್ಟಕದಲ್ಲಿನ ಕ್ರಮ ಸಂಖ್ಯೆ (1),(3),(4),(7),(8),(9) ಹಾಗು (10) ರಲ್ಲಿ ತಿಳಿಸಿದ ಪಂಚಾಯತ್ ಸಂಸ್ಥೆಗಳಿಗೆ ಅವುಗಳ ಮುಂದೆ ನಮೂಧಿಸಿದ ಮೊತ್ತವನ್ನು ಆಯಾ ಸಂಸ್ಥೆಗಳ ಬ್ಯಾಂಕ್ ಖಾತೆಗಳಿಗೆ ಆನ್‌ಲೈನ್ ಮೂಲಕ ವರ್ಗಾಯಿಸುವುದು.
6. ಉತ್ತೇಜನ ಬಹುಮಾನದ ಮೊತ್ತವು ಆಯಾ ಪಂಚಾಯತ್ ಸಂಸ್ಥೆಗಳ ಬ್ಯಾಂಕ್ ಖಾತೆಗಳಿಗೆ ದಿನಾಂಕ:31.03.2013ರೊಳಗಾಗಿ ಆನ್‌ಲೈನ್‌ನಲ್ಲಿ ವರ್ಗಾವಣೆಗೊಂಡಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.
7. **ಪಂಚಾಯತಿಗಳಿಗೆ ಬಿಡುಗಡೆಗೊಳಿಸಿದ ಉತ್ತೇಜನ ಬಹುಮಾನದ ವಿನಿಯೋಗಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(signature) 28/3/13
(ಮಾರ್ಗರೇಟ್ ಲೀನಾ ನರೋನ್ಹ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ.)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಇವರಿಗೆ,**

1. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಲಲಿತ ಮಹಲ್ ರಸ್ತೆ, ಮೈಸೂರು.

2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಚಿಕ್ಕಮಗಳೂರು, ಬೀದರ್, ರಾಮನಗರ, ಉಡುಪಿ, ಧಾರವಾಡ, ಬೆಳಗಾವಿ, ಶಿವಮೊಗ್ಗ, ಕೊಡಗು, ಕೊಪ್ಪಳ ಮತ್ತು ಗದಗ ಜಿಲ್ಲೆಗಳು.
3. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ, ಕೊಪ್ಪ, ಬಸವ ಕಲ್ಯಾಣ, ಪುತ್ತೂರು ಮತ್ತು ಬೈಲಹೊಂಗಲ ತಾಲ್ಲೂಕುಗಳು.
4. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತಿ, ಘಾಟಬೋರಾಳ (ಹುಮ್ನಾಬಾದ್ ತಾಲ್ಲೂಕು, ಬೀದರ್ ಜಿಲ್ಲೆ), ಇಟ್ಟಮಡು (ರಾಮನಗರ ತಾಲ್ಲೂಕು ಮತ್ತು ಜಿಲ್ಲೆ), ಮಡಮಕ್ಕಿ (ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ) ಗುಮ್ಮಗೋಳ (ನವಲಗುಂದ ತಾಲ್ಲೂಕು, ಧಾರವಾಡ ಜಿಲ್ಲೆ), ಮೇಲಿನಬೆಸಗೆ(ಹೊಸನಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ), ವಾಲ್ನೂರು-ತ್ಯಾಗತ್ತೂರು (ಸೋಮವಾರ ಪೇಟೆ ತಾಲ್ಲೂಕು, ಕೊಡಗು ಜಿಲ್ಲೆ), ಯರಗೇರಾ (ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ ) ಮತ್ತು ಹುಲಕೋಟಿ (ಗದಗ ತಾಲ್ಲೂಕು, ಗದಗ ಜಿಲ್ಲೆ).
5. ಮುಖ್ಯ ವ್ಯವಸ್ಥಾಪಕರು, ಸಿಂಡಿಕೇಟ್ ಬ್ಯಾಂಕ್, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಶಾಖೆ, ಬೆಂಗಳೂರು.
6. ಇಲಾಖಾ ವೆಬ್‌ಸೈಟ್ / ಕರ್ನಾಟಕ ವಿಕಾಸ ಮಾಸ ಪತ್ರಿಕೆ.
7. ಶಾಖಾ ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿ.

<u>ಪ್ರತಿಯನ್ನು ಮಾಹಿತಿಗಾಗಿ :</u>

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು (ಪಂ.ರಾಜ್), ಗ್ರಾ.ಅ.ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಮಹಾನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ ಇವರ ಆಪ್ತ ಕಾರ್ಯದರ್ಶಿಗಳು, ಲಲಿತಮಹಲ್ ರಸ್ತೆ, ಮೈಸೂರು.
3. ನಿರ್ದೇಶಕರು (ಪಂ.ರಾಜ್), ಗ್ರಾ.ಅ.ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.
4. ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ, ಗ್ರಾ.ಅ.ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು.